**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 95/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಹರೀಶ | ಪಿಡಬ್ಲೂ - 16 |
| ತಂದೆಯ ಹೆಸರು | - ವಿಠಲ ಸಾಲಿಯಾನ್ | ಸಿಡಬ್ಲೂ - 24 |
| ವಯಸ್ಸು | - 57 ವರ್ಷ | |
| ಉದ್ಯೋಗ | - ಪೊಲೀಸ್ ಉಪನಿರೀಕ್ಷಕರು,<br>ಸಿಸಿಆರ್ ಬಿ ಘಟಕ<br>ಮಂಗಳೂರು | |
| ವಾಸ ಸ್ಥಳ | - ಮಂಗಳೂರು | |

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 03-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ದಿಃ 20-02-2024 ರಿಂದ 18-06-2024 ರವರೆಗೆ ನಾನು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 10-05-2024 ರಂದು ಪ್ರಾಸಾ.13 ರವರು ನನ್ನನ್ನು, ಚಾಸಾ.25 ಮತ್ತು ಚಾಸಾ.26 ರವರನ್ನು ನಗರ ಪೊಲೀಸ್ ಠಾಣೆಯ ಮೊ.ಸಂಃ 77/2024 ರ ಆರೋಪಿಯ ಪತ್ತೆಗಾಗಿ ವಿಶೇಷ ಕರ್ತವ್ಯಕ್ಕೆ ನೇಮಿಸಿ ಆ ಬಗ್ಗೆ ಜ್ಞಾಪನವನ್ನು ನೀಡಿದ್ದರು. ಸಾಕ್ಷಿಯು ಸದರಿ ಜ್ಞಾಪನವನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಜ್ಞಾಪನವನ್ನು ನಿಪಿ.41 ಎಂದು ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.41(ಎ) ಎಂದು ಗುರುತಿಸಲಾಯಿತು.

3. ಅದರಂತೆ ನಾವು ಅದೇ ದಿನ ಬೆಳಿಗ್ಗೆ 8 ಗಂಟೆಗೆ ಠಾಣೆಯಿಂದ ಹೊರಟವು ಚಿಕ್ಕಮಗಳೂರಿನ ಬಸವನಹಳ್ಳಿ, ಕೆಂಪನಹಳ್ಳಿ ಮತ್ತು ರಾಮನಹಳ್ಳಿ ಕಡೆಗಳಲ್ಲಿ ಆರೋಪಿಯ ಪತ್ತೆಗಾಗಿ ಸಂಚರಿಸುತ್ತಿದ್ದಾಗ ಮಧ್ಯಾಹ್ನ ಆರೋಪಿ ಚಿಕ್ಕಮಗಳೂರು ನಗರದ ರಾಮನಹಳ್ಳಿ ಬಸ್ ನಿಲ್ದಾಣದ ಬಳಿ ಇರುವ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ಬಂದ ಮೇರೆಗೆ ನಾವು ಮಧ್ಯಾಹ್ನ 1.45 ಗಂಟೆಗೆ ರಾಮನಹಳ್ಳಿ ಬಸ್ ನಿಲ್ದಾಣದ ಹತ್ತಿರ ಹೋಗಿ ನೋಡಲಾಗಿ ಮಾಹಿತಿಯಲ್ಲಿ ತಿಳಿಸಿದಂತಹ ಚಹರೆಯನ್ನು ಹೋಲುವಂತಹ ವ್ಯಕ್ತಿ ಸದರಿ ಬಸ್ ನಿಲ್ದಾಣದ ಬಳಿ ನಿಂತಿರುವುದು ಕಂಡುಬಂತು. ಆತನನ್ನು ನಾನು ಸಿಬ್ಬಂದಿಗಳ ಸಹಾಯದಿಂದ ವಶಕ್ಕೆ ಪಡೆದು ವಿಚಾರಿಸಿದಾಗ ಆತ ತನ್ನ ಹೆಸರು ಎಸ್.ಆರ್.ಪೂರ್ಣೇಶ್ ಕುಮಾರ ಎಂದು ತನ್ನ ತಂದೆಯ ಹೆಸರು ಮತ್ತು ವಿಳಾಸವನ್ನು ತಿಳಿಸಿದ್ದು ತಾನು ಆ ದಿನ ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ಐ.ಜಿ.

ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ಸ್ ಹತ್ತಿರ ಬಿಕ್ಷಾಟನೆ ಮಾಡಿಕೊಂಡು ಫುಟಪಾತ್ ರಸ್ತೆಯ ಬಳಿ ಮಲಗಿದ್ದ ಮಹಿಳೆಯೊಬ್ಬರಿಗೆ ತನ್ನ ಕಾಲನ್ನು ಒತ್ತುವಂತೆ ಕೇಳಿದಾಗ ಆಕೆ ಕಾಲು ಒತ್ತಲು ನಿರಾಕರಿಸಿದ್ದರಿಂದ ತಾನು ಕೋಪಗೊಂಡು ಆಕೆಯ ತಲೆಯ ಮೇಲೆ ಸೈಜ್ ಕಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿದ್ದಾಗಿ ತಿಳಿಸಿದ್ದರಿಂದ ಆತನನ್ನು ವಶಕ್ಕೆ ಪಡೆದು ಮಧ್ಯಾಹ್ನ 2 ಗಂಟೆಗೆ ಠಾಣೆಗೆ ಹಿಂದಿರುಗಿ ಪ್ರಾಸಾ.13 ರವರ ಮುಂದೆ ಆತನನ್ನು ಹಾಜರುಪಡಿಸಿ ಆ ಬಗ್ಗೆ ವರದಿಯನ್ನು ನೀಡಿದ್ದೆನು. ಸಾಕ್ಷಿಯು ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ವರದಿಯನ್ನು ಈಗಾಗಲೇ ನಿಪಿ.28 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಗಳನ್ನು ನಿಪಿ.28(ಬಿ) ಎಂದು ಗುರುತಿಸಲಾಯಿತು.

4. ಸಾಕ್ಷಿಯು ಈ ದಿನ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಆ ದಿನ ನಾವು ವಶಕ್ಕೆ ಪಡೆದು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ ವ್ಯಕ್ತಿ ಆತನೇ ಎಂದು ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿಃ **LADCS** ನ **Deputy Chief Defense counsel** ಆದ ಶ್ರೀ ಎನ್.ಡಿ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ

ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

5. ಆರೋಪಿಯನ್ನು ನೀವು ಹೇಳಿದ ಸ್ಥಳ ಮತ್ತು ಸಮಯದಲ್ಲಿ ವಶಕ್ಕೆ ಪಡೆದ ಬಗ್ಗೆ ಯಾವುದಾದರೂ ಸ್ವತಂತ್ರ ವ್ಯಕ್ತಿಗಳನ್ನು ಸಾಕ್ಷಿಯಾಗಿ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳಿದ ಸ್ಥಳ ಮತ್ತು ಸಮಯದಲ್ಲಿ ಆರೋಪಿಯನ್ನು ವಶಕ್ಕೆ ಪಡೆದ ಬಗ್ಗೆ ಸುತ್ತಮುತ್ತ ಸಿಸಿ ಕ್ಯಾಮೆರಗಳ ದೃಶ್ಯಾವಳಿಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಅದನ್ನು ತನಿಖಾಧಿಕಾರಿಗಳು ಮಾಡಬೇಕಾಗುತ್ತದೆ ಎನ್ನುತ್ತಾರೆ.

6. ನೀವು ಆರೋಪಿಯನ್ನು ಮಧ್ಯಾಹ್ನ 1.45 ಗಂಟೆಗೆ ವಶಕ್ಕೆ ಪಡೆದಿದ್ದಾಗಿ ಹೇಳಿದ್ದೀರಿ ಆ ಸಮಯಕ್ಕೆ ಆರೋಪಿ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ನಿಮ್ಮ ವಶದಲ್ಲಿದ್ದನು ಎಂದರೆ ಸರಿಯಲ್ಲ. ಆರೋಪಿ ಮಾನಸಿಕ ಅಸ್ವಸ್ಥನಾಗಿದ್ದು ಆತನನ್ನು ಸಾರ್ವಜನಿಕರು ಹಿಡಿದು ನಿಮಗೆ ಒಪ್ಪಿಸಿದ್ದರು ಎಂದರೆ ಸರಿಯಲ್ಲ.

7. ಚಿಕ್ಕಮಗಳೂರಿನ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಧೀಶರವರು ಕ್ರಿಮಿನಲ್ ಮಿಸ್ 307/2023 ರಲ್ಲಿ ಮಾಡಿದ್ದ ಆದೇಶದ ಮೇರೆಗೆ ಆರೋಪಿಯನ್ನು ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುವಂತೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣಾಧಿಕಾರಿಗೆ

ಸೂಚಿಸಲಾಗಿತ್ತು ಮತ್ತು ಮಾನಸಿಕ ಆರೋಗ್ಯ ಕಾಯ್ದೆ ಅಡಿಯಲ್ಲಿ ಆತ ಚಿಕಿತ್ಸೆಪಡೆದುಕೊಂಡ ಬಗ್ಗೆ ದಾಖಲೆಗಳು ಸದರಿ ಠಾಣೆಯಲ್ಲಿ ಇದ್ದವು ಎಂದರೆ ಸರಿಯಲ್ಲ. ಆರೋಪಿ ಭೈಪೋಲರ್ ಡಿಸ್ ಆರ್ಡರ್ ನಿಂದ ಬಳಲುತ್ತಿದ್ದರೂ ಸಹ ನೀವು ಆತನಿಗೆ ಚಿಕಿತ್ಸೆ ಕೊಡಿಸದೇ ನೀವು ಕರ್ತವ್ಯ ಲೋಪವೆಸಗಿದ್ದೀರಿ ಎಂದರೆ ಸರಿಯಲ್ಲ.

8. ನೀವು ಆರೋಪಿಯನ್ನು ವಶಕ್ಕೆ ಪಡೆಯದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ನಿಪಿ.28 ರಂತೆ ಸುಳ್ಳು ವರದಿಯನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ಅಕ್ರಮ ಬಂಧನವನ್ನು ಸರಿಪಡಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ.41 ಮತ್ತು ಪಿ.28 ದಾಖಲೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ